ಎಲ್.ಓ.ಸಿ.ನಲ್ಲಿ ಕಂಟ್ರಾಕ್ಟ್‌ದಾರರಿಗೆ ಹಣ ಕೊಡುವುದಕ್ಕೆ ಮುಂಚೆ ಯಾರಿಂದ ಭೂಮಿಯನ್ನು ಪಡೆಯಲಾಗಿದೆ ಅವರಿಗೆ ಹಣವನ್ನು ಕೊಡುತ್ತೇವೆಂದು ಹೇಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಅಗ್ನಿಶಾಮಕ ಠಾಣೆಗಳು.

284 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಕಾರಾಗೃಹ ಪೌರರಕ್ಷಣೆ, ಸೈನಿಕಕಲ್ಯಾಣ ಮತ್ತು ಅಗ್ನಿಶಾಮಕ ಸೇವೆಗಳ ರಾಜ್ಯಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ಕೆಲಸ ನಿರ್ವಹಿಸುತ್ತಿರುವ ಅಗ್ನಿಶಾಮಕ ಠಾಣೆಗಳೆಷ್ಟು ?

ಆ) ಉಳ್ಳಾಲದಲ್ಲಿ ಒಂದು ಅಗ್ನಿಶಾಮಕ ಠಾಣೆ ಸ್ಥಾಪಿಸುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ವಿ. ಸೋಮಣ್ಣ (ಕಾರಾಗೃಹ, ಪೌರರಕ್ಷಣೆ, ಸೈನಿಕಕಲ್ಯಾಣ ಮತ್ತು ಅಗ್ನಿಶಾಮಕ ಸೇವೆಗಳ ರಾಜ್ಯಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಅಗ್ನಿಶಾಮಕ ಠಾಣೆಗಳ ಸಂಖ್ಯೆ 5. ಅವು ಯಾವುವೆಂದರೆ, ಮಂಗಳೂರು (ಪಾಂಡೇಶ್ವರ) ಮಂಗಳೂರು (ಕದ್ರಿ), ಪುತ್ತೂರು, ಮೂಡಬಿದ್ರಿ, ಬೆಳ್ತಂಗಡಿ.

ಆ) ಸದ್ಯಕ್ಕೆ ಯೋಜನೆ ಇಲ್ಲ. ಅವಶ್ಯಕತೆ ಒದಗಿ ಬಂದಲ್ಲಿ ಪರಿಗಣಿಸಲಾಗುವುದು.

ಶ್ರೀ ಕೆ. ಜಯರಾಮಶೆಟ್ಟಿ : ಮಾನ್ಯ ಅಧ್ಯಕ್ಷರೆ, ಉಳ್ಳಾಲದಲ್ಲಿ ಒಂದು ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸುವ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. 'ಸಧ್ಯಕ್ಕೆ ಯೋಜನೆ ಇಲ್ಲ, ಅವಶ್ಯಕತೆ ಒದಗಿ ಬಂದಲ್ಲಿ ಪರಿಗಣಿಸಲಾಗುವುದೆಂದು' ಉತ್ತರ ಕೊಟ್ಟಿದ್ದಾರೆ. ಉಳ್ಳಾಲಕ್ಕೆ ಮಂಗಳೂರಿನಿಂದ 15 ಕಿ.ಮೀ. ದೂರವಿದೆ. ಅಗ್ನಿಶಾಮಕ ವ್ಯಾನ್ ಮಂಗಳೂರಿನಿಂದ ಉಳ್ಳಾಲಕ್ಕೆ ಬರುವುದಕ್ಕೆ ಒಂದು ಗಂಟೆ ಕಾಲ ತೆಗೆದುಕೊಳ್ಳುತ್ತದೆ. ಎಲ್ಲಾ ಸುಟ್ಟುಹೋದ ನಂತರ, ಬಾವಿಗೆ ಬಿದ್ದವರು ಸತ್ತು ಹೋದ ನಂತರ ಅಲ್ಲಿಗೆ ಬಂದು ಏನೂ ಮಾಡುವುದಕ್ಕಾಗುವುದಿಲ್ಲ. ಉಳ್ಳಾಲನಗರ ಹೆಚ್ಚು ವಿಸ್ತಾರಗೊಳ್ಳುತ್ತಿದೆ. ಮಂಗಳೂರಿನಲ್ಲಿ ಪಾಂಡವೇಶ್ವರ ಮತ್ತು ಕದ್ರಿ ಹೀಗೆ 2 ಕಡೆ ಅಗ್ನಿಶಾಮಕ ಠಾಣೆಗಳು ಇವೆ.

ಅಧ್ಯಕ್ಷರು : ಶ್ರೀ ಜಯರಾಮಶೆಟ್ಟರೆ, ಹಾಗೆ ಕೇಳುವುದು ಅಲ್ಲ. ಎಷ್ಟು ಬೆಂಕಿ ಆಕಸ್ಮಿಕಗಳು ಇತ್ತೀಚೆಗೆ ಆಗಿವೆ ?

ಶ್ರೀ ಕೆ. ಜಯರಾಮಶೆಟ್ಟಿ : ನನ್ನ ಕ್ಷೇತ್ರದಲ್ಲಿ ಕಳೆದ 6 ತಿಂಗಳಲ್ಲಿ 4 ಬೆಂಕಿ ಆಕಸ್ಮಿಕಗಳು ಆಗಿವೆ.

ಅಧ್ಯಕ್ಷರು : ಆಲ್‌ರೈಟ್, ನೋಡೋಣ, ಇಷ್ಟು ಬೆಂಕಿ ಆಕಸ್ಮಿಕಗಳು ಆದರೆ ಅಗ್ನಿಶಾಮಕ ಠಾಣೆಗಳ ಅಗತ್ಯ ಇದೆಯೋ ಅಥವಾ ಇಲ್ಲವೋ ಎನ್ನುವುದನ್ನು ಸರ್ಕಾರದಿಂದ ಕೇಳೋಣ.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, ಈಗಾಗಲೇ ದಕ್ಷಿಣ ಕನ್ನಡದ ಮೂಡಬಿದಿರೆ ಮತ್ತು ಬೆಳ್ತಂಗಡಿಯಲ್ಲಿ ಸುಮಾರು ಒಂದು ವರ್ಷದಿಂದೀಚೆಗೆ ಒಂದೊಂದು ಅಗ್ನಿಶಾಮಕ ಠಾಣೆಗಳನ್ನು

ಸರ್ಕಾರದಿಂದ ಸ್ಥಾಪನೆ ಮಾಡಲಾಗಿದೆ. ಮಂಗಳೂರಿನ ಪಾಂಡೇಶ್ವರ ಮತ್ತು ಕದ್ರಿ ಎಂಬಲ್ಲಿ ಈಗಾಗಲೇ 2 ಅಗ್ನಿಶಾಮಕ ಠಾಣೆಗಳಿವೆ. ಸುಳ್ಯ ಮತ್ತು ಸುರತ್ಕಲ್ಲಿನಲ್ಲಿ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆ. ಉಳ್ಳಾಲದಲ್ಲಿ ಒಂದು ಅಗ್ನಿಶಾಮಕ ಠಾಣೆಯನ್ನು ಸ್ಥಾಪನೆ ಮಾಡಬೇಕೆಂದು ಮಾನ್ಯ ಸದಸ್ಯರು ಈಗ ಹೇಳಿದರು. 1998-99ನೇ ಸಾಲಿಗೆ 15 ಅಗ್ನಿಶಾಮಕ ಠಾಣೆಗಳನ್ನು ಎಲ್ಲೆಲ್ಲಿಗೆ ಕೊಡಬೇಕೆನ್ನುವ ಪ್ರಸ್ತಾವನೆ ಸರ್ಕಾರದ ಮುಂದೆ ಅಂಗೀಕಾರಕ್ಕೋಸ್ಕರ ಬಂದಿದೆ. ಪ್ರಾಯಶಃ ಇದಾದಮೇಲೆ ಮಾನ್ಯ ಸದಸ್ಯರು ಕೇಳಿದಂತೆ ವಿಶೇಷವಾಗಿ ಇರತಕ್ಕಂಥ ಯಾವುದಾದರೂ ಒಂದು ಅಥವಾ ಎರಡು ಕಡೆಗೆ ಅಗ್ನಿಶಾಮಕ ಠಾಣೆ ಬೇಕಾಗಿದ್ದರೆ ಅದನ್ನೂ ಕೂಡ ಗಣನೆಗೆ ತೆಗೆದುಕೊಳ್ಳುತ್ತೇವೆ. ಉಳ್ಳಾಲ ರಾಷ್ಟ್ರೀಯ ಹೆದ್ದಾರಿಯಲ್ಲಿ ಇರುವುದರಿಂದ 15 ಕಿ.ಮೀ. ಅಂಥ ಮಹತ್ತರವಾದ ದೂರ ಏನೂ ಇಲ್ಲ. ಮಂಗಳೂರಿನಲ್ಲಿ ಮೊದಲು ಒಂದು ಅಗ್ನಿಶಾಮಕ ಠಾಣೆ ಇದ್ದು ಈಗ 2 ಠಾಣೆಗಳು ಇವೆ. ಮತ್ತು ಅವು ಏಕಕಾಲದಲ್ಲಿ ಕೆಲಸವನ್ನು ನಿರ್ವಹಿಸುತ್ತಿವೆ. ಉಳ್ಳಾಲದಲ್ಲಿ ಅಗ್ನಿಶಾಮಕ ಠಾಣೆಯ ಅವಶ್ಯಕತೆ ಇದೆಯೇ ಎನ್ನುವುದನ್ನು ಪರಿಶೀಲಿಸಲು ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿಕೊಡುತ್ತೇನೆ. ಅಲ್ಲಿ ಅಗ್ನಿಶಾಮಕ ಠಾಣೆಯ ಅವಶ್ಯಕತೆಯಿದೆಯೆಂದು ತಿಳಿದುಬಂದರೆ ಅದನ್ನು ಗಣನೆಗೆ ತೆಗೆದುಕೊಂಡು ಮುಂದಿನ ಹಂತದಲ್ಲಿ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಜಯಠಾಮಶೆಟ್ಟಿ : ಮಾನ್ಯ ಅಧ್ಯಕ್ಷರೆ, ಉಳ್ಳಾಲದಲ್ಲಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪನೆ ಮಾಡಿದರೆ ಸಮೀಪದಲ್ಲಿರುವ ಮುಡಿಪು, ಬಿ.ಸಿ. ರೋಡು ಮತ್ತು ವಿಟ್ಲಕ್ಕೆ ಸಮೀಪವಾಗುತ್ತದೆ. ಮಂಗಳೂರಿನಿಂದ ಉಳ್ಳಾಲಕ್ಕೆ ಸಮಯಕ್ಕೆ ಸರಿಯಾಗಿ ವ್ಯಾನ್ ಹೋಗುವುದಕ್ಕೆ ತೊಂದರೆಯಾಗುತ್ತದೆ. ಮತ್ತು ಮಂಗಳೂರಿನಲ್ಲಿ 2 ಅಗ್ನಿಶಾಮಕ ಠಾಣೆ ಬೇಡ. ಕದ್ರಿಯಲ್ಲಿರುವ ಠಾಣೆಯನ್ನು ತೆಗೆಯು ಉಳ್ಳಾಲಕ್ಕೆ ಕೊಡಿ.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, ಈ ಸಲ ಅಂಕೋಲ ಮತ್ತು ಸುಳ್ಯ ಇವೆರಡು ಸ್ಥಳಗಳಿಗೆ ಅಗ್ನಿಶಾಮಕ ಠಾಣೆಗಳನ್ನು ಕೊಡುತ್ತಿದ್ದೇವೆ. ಉಳ್ಳಾಲದಲ್ಲಿ ಅಗ್ನಿಶಾಮಕ ಠಾಣೆಯ ಅವಶ್ಯಕತೆ ಇದೆಯೆಂದು ಮಾನ್ಯ ಸದಸ್ಯರು ಸದಸ್ಯರು ಹೇಳುತ್ತಿದ್ದಾರೆ. 175 ತಾಲ್ಲೂಕುಗಳಲ್ಲಿ ಕೂಡ ಅಗ್ನಿಶಾಮಕ ಠಾಣೆಗಳನ್ನು ತೆರೆಯುವಂಥ ಪ್ರಸ್ತಾವನೆಗೆ ಸರ್ಕಾರದಲ್ಲಿ ತುಂಬಾ ಯೋಚನೆ ಮಾಡುತ್ತಾ ಇದ್ದೇವೆ. 175 ತಾಲ್ಲೂಕುಗಳಲ್ಲಿ ಕೂಡ ಅಗ್ನಿಶಾಮಕ ಠಾಣೆಗಳು ಸ್ಥಾಪನೆ ಆಗಬೇಕಾಗುತ್ತದೆ. ಇವುಗಳನ್ನು ಹಂತಹಂತವಾಗಿ ಮಾಡುವುದು ನಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ.

ಅನುಕಂಪದ ಆಧಾರದ ಮೇಲೆ ನೇಮಕಾತಿ.

285 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ನೌಕರರು ಸೇವೆಯಲ್ಲಿರುವಾಗಲೇ ಮೃತಪಟ್ಟರೆ ಕುಟುಂಬದವರಿಗೆ ಸರ್ಕಾರಿ ನೌಕರಿ ನೀಡುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?